ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀಮತಿ ಗೀತಾ ಅಧ್ಯಕ್ಷರು ಮತ್ತು ಇತರೆ ಸದಸ್ಯರುಗಳು, ಹುಳಿಯಾರು ಗ್ರಾಮ ಪಂಚಯತಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) ಮತ್ತು 48(4) ರನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

ಓದಲಾಗಿದೆ:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ತುಮಕೂರು ಇವರ ಪತ್ರ ಸಂಖ್ಯೆ: ತುಜಿಪ:ಅಭಿ:ಹುಳಿಯಾರು ಗ್ರಾ.ಪಂ:ವಿವ:05:17-18 ದಿನಾಂಕ: 22.09.207.
2. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ:1107:ಗ್ರಾಪಂಅ:2017, 07.12.2017ರ ಕಾರಣ ಕೇಳುವ ನೋಟಿಸ್.
3. ಶ್ರೀಮತಿ ಗೀತಾ ಅಧ್ಯಕ್ಷರು ಮತ್ತು ಇತರೆ ಸದಸ್ಯರುಗಳು, ಹುಳಿಯಾರು ಗ್ರಾಮ ಪಂಚಾಯಿತಿ, ಇವರು ಕಾರಣ ಕೇಳುವ ನೋಟಿಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ:13.11.2017, 15.11.2017, 16.11.2017, 16.11.2017, 16.11.2017, 27.12.2017.
4. ಇದೇ ಸಮಸಂಖ್ಯೆಯ ವಿಚಾರಣಾ ನೋಟೀಸಿನ ದಿನಾಂಕ: 02.01.2018, 06.03.2018, 25.08.2018, 11.01.2019, 25.01.2019 ವಿಚಾರಣೆ ನಡೆದ ದಿನಾಂಕ:09.01.2018, 20.03.2018, 01.09.2018, 16.01.2019, 29.01.2019.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರಲ್ಲಿ ಶ್ರೀಮತಿ ಗೀತಾ ಅಧ್ಯಕ್ಷರು ಮತ್ತು ಶ್ರೀ ಹೆಚ್.ಜಿ.ಶಂಕರ್, ಶ್ರೀಮತಿ ಇಂದ್ರಕಲಾ, ಶ್ರೀಮತಿ ಪುಟ್ಟಮ್ಮ(ಪುಟ್ಟಿಬಾಯಿ), ಶ್ರೀ ಗಣೇಶ್, ಶ್ರೀಮತಿ ನೂರ್‌ಜಾನ್ ಬಿ, ಸದಸ್ಯರುಗಳು, ಹುಳಿಯಾರು ಗ್ರಾಮ ಪಂಚಾಯತಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ ಇವರುಗಳು ಹುಳಿಯಾರು ಗ್ರಾಮ ಪಂಚಾಯಿತಿಯ 14ನೇ ಹಣಕಾಸು ಯೋಜನೆಯಡಿಯಲ್ಲಿ ನಿಯಮಬಾಹಿರವಾಗಿ ಗ್ರಾಮ ಪಂಚಾಯತಿಯಿಂದ ಸಾಮಗ್ರಿ ಖರೀದಿ ಮತ್ತು 2015-16, 2016-17ನೇ ಸಾಲಿನ ವರ್ಗ-1ರ ನಿಧಿಯಿಂದ ಕಾಮಗಾರಿ ನಿರ್ವಹಿಸಿದ ಬಾಬ್ತು ಹಣವನ್ನು ಅವರುಗಳ ಹೆಸರಿಗೆ ಪಡೆದಿರುವುದು, ಹಣಕಾಸಿನ ಹಿತಾಸಕ್ತಿ ಹೊಂದಿರುವುದು ಕಂಡುಬಂದಿರುತ್ತದೆಂದು ಶ್ರೀಮತಿ ಗೀತಾ ಹೆಚ್.ಎಸ್ ಅಧ್ಯಕ್ಷರು ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 48(4)ರಂತೆ ಹಾಗೂ ಸದಸ್ಯರುಗಳ ವಿರುದ್ಧ 43(ಎ)ರನ್ವಯ ಕ್ರಮ ಕೈಗೊಳ್ಳುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 43-ಎ ಮತ್ತು 48(4) ರಡಿ ಕ್ರಮ ವಹಿಸುವ ಪೂರ್ವದಲ್ಲಿ ನಿಯಮಾನುಸಾರ ಕಾರಣ ಕೇಳುವ ನೋಟೀಸನ್ನು ದಿನಾಂಕ: 07.12.2017 ರಂದು ಜಾರಿ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3) ರಲ್ಲಿ ಸದರಿಯವರು ಕಾರಣ ಕೇಳುವ ನೋಟೀಸಿಗೆ ಈ ಕೆಳಕಂಡಂತೆ ಉತ್ತರ ಸಲ್ಲಿಸಿರುತ್ತಾರೆ.

1. ಶ್ರೀಮತಿ ಎಸ್.ಗೀತಾ, ಅಧ್ಯಕ್ಷರು, ಹುಳಿಯಾರು ಗ್ರಾಮ ಪಂಚಾಯತಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ ರವರು ನನ್ನ ಮೇಲೆ ಮಾಡಿರುವ ಹುಳಿಯಾರು ಗ್ರಾಮ ಪಂಚಾಯತಿಯ ಸಂತೆ ಹರಾಜಿನ ಹಣವನ್ನು ಒಂದೇ ಕಂತಿನಲ್ಲಿ ಪಾವತಿ ಮಾಡಿಲ್ಲವೆಂಬ ಆರೋಪಕ್ಕೆ ಸಂಬಂಧಿಸಿದಂತೆ ಹರಾಜಿನ ಹಣವನ್ನು ವಸೂಲಿ ಮಾಡುವ ಅಧಿಕಾರವು ಅಭಿವೃದ್ಧಿ ಅಧಿಕಾರಿಗೆ ಇರುತ್ತದೆ. ನಂತರದ ದಿನಗಳಲ್ಲಿ ಈ ವಿಷಯವು ತಿಳಿದ ಕೂಡಲೇ ಸಂಬಂಧಿಸಿದವರಿಗೆ ನೋಟಿಸ್ ಜಾರಿ ಮಾಡಿ ಪೂರ್ಣ ಪ್ರಮಾಣದ ಹಣವನ್ನು ಕಟ್ಟಿಸಿರುತ್ತೇನೆ. ಪ್ರತಿ ಲಗತ್ತಿಸಿರುತ್ತೇನೆ. 2016-17ನೇ ಸಾಲಿನ ವರ್ಗ-1 ರಡಿಯಲ್ಲಿ ವೆಚ್ಚಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಯ ಸಿಬ್ಬಂದಿ/ಸದಸ್ಯರೆಂದೂ ಚೆಕ್‌ನಲ್ಲಿ ನಮೂದು ಮಾಡಿರುವುದಿಲ್ಲ. ನಾನು ಅವರ ಹೆಸರಿನವರೇ ಬೇರೆಯವರಿರಬಹುದೆಂದು ಚೆಕ್‌ಗೆ ಸಹಿ ಮಾಡಿರುತ್ತೇನೆ. 2016-17ನೇ ಸಾಲಿನ ವರ್ಗ-1 ರಡಿಯಲ್ಲಿ ರೂ.1,75,909/-ಗಳನ್ನು ಸಿಬ್ಬಂದಿ ಹಾಗೂ ಗ್ರಾ.ಪಂ. ಸದಸ್ಯರುಗಳಿಗೆ

ಪಾವತಿಸಿರುವುದಾಗಿ ಆರೋಪಿಸಲಾಗಿರುತ್ತದೆ. ಚೆಕ್ ಬರೆಯುವ ಅಧಿಕಾರ ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಇರುವುದರಿಂದ, ನಾನು ಬೇರೆಯವರೆಂದು ತಿಳಿದು ಸಹಿ ಮಾಡಿರುತ್ತೇನೆ. 2016-17ನೇ ಸಾಲಿನ 14ನೇ ಹಣಕಾಸಿನ ಯೋಜನೆಯಡಿಯಲ್ಲಿ ಕ್ರಿಯಾ ಯೋಜನೆ ಅನುಮೋದನೆ ಪಡೆದು ವಿದ್ಯುತ್ ದೀಪಗಳ ಸಾಮಗ್ರಿಗಳನ್ನು ಖರೀದಿ ಮಾಡಲಾಗಿರುತ್ತದೆ. 2016-17ನೇ ಸಾಲಿನ 14ನೇ ಹಣಕಾಸಿನ ಯೋಜನೆಯಡಿಯಲ್ಲಿ ಕೊಟೇಷನ್ ಮತ್ತು ಬಿಲ್ ಅನ್ನು ಪಡೆದು ಶ್ರೀನಿವಾಸ ಎಂಟರ್‌ಪ್ರೈಸಸ್ ತಿಪಟೂರು ರವರಿಗೆ ನೀರಿನ ಸಾಮಗ್ರಿಗಳ ಬಾಬ್ತನ್ನು ನೀಡಿರುತ್ತೇನೆ. 2016-17ನೇ ಸಾಲಿನ ಅಂಗವಿಕಲ ಖಾತೆಯಿಂದ ಎಲ್.ಇ.ಡಿ. ಲೈಟ್ ಖರೀದಿಗೆ ಸಂಬಂಧಿಸಿದಂತೆ ನಾನು ಚೆಕ್‌ಗೆ ಸಹಿ ಮಾಡುವ ಮೊದಲು ಎಲ್ಲಾ ವಿವರಗಳನ್ನು ನೋಡಿ ಸಹಿ ಮಾಡಿರುತ್ತೇನೆ. 2016-17ನೇ ಸಾಲಿನ 14ನೇ ಹಣಕಾಸಿನ ಯೋಜನೆಯಡಿಯಲ್ಲಿ ಎಸ್.ಸಿ/ಎಸ್.ಟಿ ಅನುದಾನವನ್ನು ಪಿಡಿಓ ರವರು ನನಗೆ ತಿಳಿಯದೇ ನನ್ನಿಂದ ಸಹಿ ಹಾಕಿಸಿ ಕಂಪ್ಯೂಟರ್ ಸೆಂಟರ್‌ಗೆ ನೀಡಿರುತ್ತಾರೆ. ನನಗೆ ತಿಳಿದ ಕೂಡಲೇ ಪುನಃ ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಗೆ ರೂ.1,75,000/- ಮತ್ತು ರೂ.4,000/-ಗಳನ್ನು ತುಂಬಿರುತ್ತಾರೆ. 2016-17ನೇ ಸಾಲಿನ 14ನೇ ಹಣಕಾಸಿನ ಯೋಜನೆಯಡಿಯಲ್ಲಿ ಗ್ರಾಮ ನೈರ್ಮಲ್ಯದ ಬಾಬ್ತಿಗೆ ಸಂಬಂಧಿಸಿದಂತೆ ಸಾಮಾನ್ಯ ಸಭೆ ನಡವಳಿ, ಅಂದಾಜು ಪಟ್ಟಿ, ಕರಾರು ಪತ್ರ, ಕಾರ್ಯಾದೇಶ ಪತ್ರ, ಹಂತ ಹಂತದ ಫೋಟೋಗಳನ್ನು ಪರಿಶೀಲನೆ ಮಾಡಿದ ನಂತರವೇ ಸಂಬಂಧಪಟ್ಟವರಿಗೆ ಚೆಕ್ ನೀಡಲಾಗಿರುತ್ತದೆ. ಆದ್ದರಿಂದ ಈ ಮೇಲಿನ ಎಲ್ಲಾ ಆರೋಪಗಳು ನಿರಾಧಾರವಾಗಿದೆ ಎಂದು ಪರಿಗಣಿಸುತ್ತಾ ಹಾಗೂ ರಾಜಕೀಯ ಧುರೀಣರು ನನ್ನ ಮೇಲೆ ಇಲ್ಲಸಲ್ಲದ ಆರೋಪ ಮಾಡಿ ನನ್ನನ್ನು ಅಧ್ಯಕ್ಷಗಿರಿಯಿಂದ ಇಳಿಸುವ ಪ್ರಯತ್ನ ಮಾಡುತ್ತಿರುತ್ತಾರೆ. ಕಡತಗಳ ನಿರ್ವಹಣೆ, ಕಡತಗಳ ಮೇಲುಸ್ತುವಾರಿ ಅಧಿಕಾರಿಗಳದ್ದಾಗಿರುತ್ತದೆ. ಈ ಮೇಲಿನ ಆರೋಪಗಳನ್ನು ನಿರಾಕರಿಸಿರುವುದರಿಂದ ನನ್ನ ವಿರುದ್ಧ ಕ್ರಮ ಜರುಗಿಸಬಾರದೆಂದು ವಿನಂತಿಸಿಕೊಂಡಿರುತ್ತಾರೆ.

2. **ಶ್ರೀಮತಿ ಇಂದಿರಾಕಲಾ ಜೆ, ಸದಸ್ಯರು, ಹುಳಿಯಾರು ಗ್ರಾಮ ಪಂಚಾಯತಿ, ಚಿಕ್ಕನಾಯಕನಹಳ್ಳಿ** ತಾಲ್ಲೂಕು, ತುಮಕೂರು ಜಿಲ್ಲೆ ರವರ ಪರವಾಗಿ, ವಕೀಲರು ನೀಡಿರುವ ಸಮಜಾಯಿಷಿಯಲ್ಲಿ ನಮ್ಮ ಕಕ್ಷೀದಾರರು ಪ್ರಥಮ ಬಾರಿಗೆ ಗ್ರಾ.ಪಂ. ಸದಸ್ಯರಾಗಿ ಆಯ್ಕೆಯಾಗಿರುತ್ತಾರೆ. ಯಾವುದೇ ರೀತಿಯ ಗುತ್ತಿಗೆ ಕರಾರನ್ನು ನೇರವಾಗಿಯೇ ಆಗಲಿ ಅಥವಾ ಪರೋಕ್ಷವಾಗಿಯೇ ಆಗಲಿ ಮಾಡಿರುವುದಿಲ್ಲ. ಅವರಿಗೆ ಬರಬೇಕಾದ ಮಾಸಿಕ ಗೌರವಧನ ಮತ್ತು ಮಾಸಿಕ ಅನುದಾನವನ್ನು ಬಿಟ್ಟು ಯಾವುದೇ ರೀತಿಯ ಹಣಕಾಸು ವ್ಯವಹಾರದಲ್ಲಿ ಭಾಗಿಯಾಗಿರುವುದಿಲ್ಲ. ತಮ್ಮ ಕರ್ತವ್ಯದ ಒತ್ತಡದಲ್ಲಿ ಸಣ್ಣ-ಪುಟ್ಟ ಕೆಲಸಗಳನ್ನು ಮಾಡಲು ಕಾರ್ಮಿಕರು ಬರುವುದು ದುಸ್ತರವಾದಾಗ ಗ್ರಾ.ಪಂ. ಸದಸ್ಯರೇ ಕೆಲವರನ್ನು ಕರೆದು ಕಾಮಗಾರಿಯನ್ನು ಮಾಡುವ ಪರಿಸ್ಥಿತಿ ಉದ್ಭವವಾಗುತ್ತದೆ. ಅಂತಹ ಸಮಯದಲ್ಲಿ ಗ್ರಾ.ಪಂ. ಹಣವನ್ನು ನೀಡುವ ಸಮಾಧಾನ ಪರಿಸ್ಥಿತಿ ಉದ್ಭವವಾಗುತ್ತದೆ. ಸದರಿ ಸಮಯದಲ್ಲಿ ಸದಸ್ಯರೇ ಕಾರ್ಮಿಕರಿಗೆ ಹಣ ಕೊಟ್ಟು ಮಾಡಿಸಿರುತ್ತಾರೆ. ನಮ್ಮ ಕಕ್ಷೀದಾರರು ಅನಿವಾರ್ಯ ಸಂದರ್ಭದಲ್ಲಿ ಅವರೇ ಸ್ವತಃ ಹಣ ಕೊಟ್ಟು ಕೆಲಸಗಳನ್ನು ಮಾಡಿಸಿರುತ್ತಾರೆ. ಸದರಿ ಹಣವನ್ನು ಕೂಲಿಕಾರರಿಗೆ ಪಾವತಿಸುವುದು ಕಾರ್ಯದರ್ಶಿಯವರ ಜವಾಬ್ದಾರಿಯಾಗಿರುತ್ತದೆ. ಆದರೆ ಕಾರ್ಯದರ್ಶಿಗಳ ಬೇಜವಾಬ್ದಾರಿ ವರ್ತನೆಯಿಂದ ನಮ್ಮ ಕಕ್ಷೀದಾರರ ಹೆಸರಿಗೆ ಚೆಕ್ ಬರೆದು ಕೊಟ್ಟು ನಮ್ಮ ಕಕ್ಷೀಧಾರರು ಬ್ಯಾಂಕಿನಿಂದ ಹಣ ಡ್ರಾಮಾಡಿ ಕೆಲಸ ಮಾಡಿದ ಕಾರ್ಮಿಕರಿಗೆ ವಿತರಣೆ ಮಾಡುವ ಪರಿಸ್ಥಿತಿ ನಿರ್ಮಾಣ ಮಾಡಿದ್ದು, ನಮ್ಮ ಕಕ್ಷೀದಾರರು ಯಾವ ಪ್ರಯೋಜನ/ಫಲಾಪೇಕ್ಷೆಯನ್ನಾಗಲೀ ಪಡೆದಿರುವುದಿಲ್ಲ. ಇದರಂತೆ ಮೋಟಾರ್ ಪಂಪ್ ಸುಟ್ಟಾಗ ಕೂಡ ತುರ್ತಾಗಿ ರಿಪೇರಿ ಮಾಡುವವರಿಗೆ ತಿಳಿಸಿ ರಿಪೇರಿ ಮಾಡಿಸಿದ್ದು, ನಮ್ಮ ಕಕ್ಷೀದಾರರು ಪಂಚಾಯತಿಗೆ ಬಿಲ್ ನೀಡಿದಾಗ್ಯೂ ಕೂಡ ರಿಪೇರಿ ಮಾಡಿದವರ ಹೆಸರಿಗೆ ಚೆಕ್ ನೀಡದೇ ಮುಂದೆ ನಿಂತು ಜವಾಬ್ದಾರಿಯಿಂದ ಕೆಲಸ ಮಾಡಿಸಿದ ನಮ್ಮ ಕಕ್ಷೀದಾರರ ಹೆಸರಿಗೆ ಚೆಕ್ ನೀಡಿ ರಿಪೇರಿ ಮಾಡಿದವರಿಗೆ ಪಾವತಿಸಿರುತ್ತಾರೆ. ಆದ್ದರಿಂದ ನಮ್ಮ ಕಕ್ಷೀದಾರರಿಗೆ ತಿಳುವಳಿಕೆ ಇಲ್ಲದೇ ಗ್ರಾ.ಪಂ. ಕಾರ್ಯದರ್ಶಿಯವರ ಉದಾಸೀನತೆಯಿಂದಾಗಿ ನಮ್ಮ ಕಕ್ಷೀದಾರರ ಮೇಲೆ ಮಾಡಿರುವ ಆಪಾದನೆಗಳನ್ನು ಕೈಬಿಡಬೇಕಾಗಿ ಕೋರಿರುತ್ತಾರೆ.

3. ಶ್ರೀಮತಿ ನೂರಜಾನ್ ಬಿ, ಸದಸ್ಯರು, ಹುಳಿಯಾರು ಗ್ರಾಮ ಪಂಚಾಯತಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ ರವರು 2015-16ನೇ ಸಾಲಿನ ವರ್ಗ-1 ರಡಿಯಲ್ಲಿ ರೂ.3000/-ಗಳ ಹಣ ಪಡೆದ ಆರೋಪಕ್ಕೆ ಸಂಬಂದಿಸಿದಂತೆ, ನಾನು ಯಾವುದೇ ಗುತ್ತಿಗೆ ಪರವಾನಗಿ ಪಡೆದಿರುವುದಿಲ್ಲ ಹಾಗೂ ವೈಯಕ್ತಿಕವಾಗಿ ಯಾವುದೇ ಹಣಕಾಸಿನ ಹಿತಾಸಕ್ತಿ ಹೊಂದಿರುವುದಿಲ್ಲ. ಗ್ರಾ.ಪಂ. ಸದಸ್ಯರಾಗಿ ಕೆಲವು ತುರ್ತು ಸಂದರ್ಭಗಳಲ್ಲಿ ದಿನ ನಿತ್ಯದ ಅಗತ್ಯಗಳಾದ ಕುಡಿಯುವ ನೀರು ಒದಗಿಸುವುದು, ನೈರ್ಮಲ್ಯ ಕಾಪಾಡುವುದು ಮತ್ತು ಇತರೆ ಸಾರ್ವಜನಿಕ ದೃಷ್ಟಿಯಿಂದ ಗಮನದಲ್ಲಿಟ್ಟುಕೊಂಡು ಜರೂರಾಗಿ ಕೆಲಸ ನಿರ್ವಹಿಸಬೇಕಾಗಿರುತ್ತದೆ. ಹೀಗೆ ನಿರ್ವಹಿಸಿರುವ ಕೆಲಸದ ಹಣವನ್ನು ನನ್ನ ಹೆಸರಿಗೆ ಕೊಡಿ ಎಂದು ನಾನು ಮೌಖಿಕವಾಗಿ ಹಾಗೂ ಲಿಖಿತವಾಗಿ ಎಂದೂ ಕೇಳಿರುವುದಿಲ್ಲ. ನಾನು ಅತಿ ಕಡಿಮೆ ವಿದ್ಯಾಭ್ಯಾಸವನ್ನು ಮಾಡಿರುವುದರಿಂದ ನನಗೆ ನಿಯಮಗಳನ್ನು ತಿಳಿಸದೇ ಚೆಕ್ಕನ್ನು ನನ್ನ ಹೆಸರಿಗೆ ಬರೆಯುವುದರ ಮುಖೇನ ನಿಯಮ ಬಾಹಿರ ಕೆಲಸಗಳನ್ನು ಮಾಡಿರುವುದು ಚೆಕ್‌ಗೆ ಸಹಿ ಮಾಡಲು ಅಧಿಕಾರ ಇವರದ್ದಾಗಿರುತ್ತದೆ. ಮುಖ್ಯವಾಗಿ ನಾನು 3ನೇ ವಾರ್ಡಿನ ಸದಸ್ಯಳಾಗಿದ್ದು, 12ನೇ ವಾರ್ಡಿನಲ್ಲಿ ಪೈಪ್‌ಲೈನ್ ರಿಪೇರಿ ಕೆಲಸ ಮಾಡಿಸುವ ವ್ಯಾಪ್ತಿಗೆ ಒಳಪಡುವುದಿಲ್ಲ. ರೂ.3000/-ಗಳನ್ನು 3ನೇ ವಾರ್ಡಿನಲ್ಲಿ ಪೈಪ್‌ಲೈನ್ ರಿಪೇರಿ ಕೆಲಸ ನಿರ್ವಹಿಸಿರುವುದರ ಬಿಲ್ಲುಗಳನ್ನು ಸಂಬಂಧಪಟ್ಟ ಅಂಗಡಿಯವರಿಂದ ಪಿಡಿಓ ಮತ್ತು ಅಧ್ಯಕ್ಷರು ಪಡೆದುಕೊಂಡಿರುತ್ತಾರೆ. ಇದರಲ್ಲಿ ಒಂದು ಪೈಸೆಯನ್ನು ನನ್ನ ಸ್ವಂತಕ್ಕೆ ಬಳಸಿರುವುದಿಲ್ಲ. ಸಾರ್ವಜನಿಕ ಹಿತಾಸಕ್ತಿಯಿಂದ ನಿರ್ವಹಿಸಿದ ಕೆಲಸವಾಗಿರುತ್ತದೆ ವಿನಃ ನನಗೆ ಯಾವುದೇ ಹಣಕಾಸಿನ ಹಿತಾಸಕ್ತಿ ಇರುವುದಿಲ್ಲ. ಆದ್ದರಿಂದ ನನ್ನ ಮೇಲೆ ಮಾಡಿರುವ ಎಲ್ಲಾ ಆರೋಪಗಳು ಸತ್ಯಕ್ಕೆ ದೂರವಾಗಿರುತ್ತದೆ. ನಾನು ಪ್ರತ್ಯಕ್ಷವಾಗಲೀ ಅಥವಾ ಪರೋಕ್ಷವಾಗಲೀ ಯಾವುದೇ ರೀತಿಯ ನಿಮಯಬಾಹಿರ ಚಟುವಟಿಕೆಯಲ್ಲಿ ಭಾಗವಹಿಸಿರುವುದಿಲ್ಲ. ನನ್ನ ಮೇಲಿನ ಆರೋಪಗಳನ್ನು ವಜಾಗೊಳಿಸಬೇಕೆಂದು ವಿನಂತಿಸಿಕೊಂಡಿರುತ್ತಾರೆ.

4. ಶ್ರೀಮತಿ ಪುಟ್ಟಮ್ಮ, ಸದಸ್ಯರು, ಹುಳಿಯಾರು ಗ್ರಾಮ ಪಂಚಾಯತಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ ರವರು 2015-16ನೇ ಸಾಲಿನ ವರ್ಗ-1 ರಡಿಯಲ್ಲಿ ರೂ.3900/-ಗಳ ಹಣ ಪಡೆದ ಆರೋಪಕ್ಕೆ ಸಂಬಂದಿಸಿದಂತೆ, ನಾನು ಯಾವುದೇ ಗುತ್ತಿಗೆ ಪರವಾನಗಿ ಪಡೆದಿರುವುದಿಲ್ಲ ಹಾಗೂ ವೈಯಕ್ತಿಕವಾಗಿ ಯಾವುದೇ ಹಣಕಾಸಿನ ಹಿತಾಸಕ್ತಿ ಹೊಂದಿರುವುದಿಲ್ಲ. ಗ್ರಾ.ಪಂ. ಸದಸ್ಯರಾಗಿ ಕೆಲವು ತುರ್ತು ಸಂದರ್ಭಗಳಲ್ಲಿ ದಿನ ನಿತ್ಯದ ಅಗತ್ಯಗಳಾದ ಕುಡಿಯುವ ನೀರು ಒದಗಿಸುವುದು, ನೈರ್ಮಲ್ಯ ಕಾಪಾಡುವುದು ಮತ್ತು ಇತರೆ ಸಾರ್ವಜನಿಕ ದೃಷ್ಟಿಯಿಂದ ಗಮನದಲ್ಲಿಟ್ಟುಕೊಂಡು ಜರೂರಾಗಿ ಕೆಲಸ ನಿರ್ವಹಿಸಬೇಕಾಗಿರುತ್ತದೆ. ಹೀಗೆ ನಿರ್ವಹಿಸಿರುವ ಕೆಲಸದ ಹಣವನ್ನು ನನ್ನ ಹೆಸರಿಗೆ ಕೊಡಿ ಎಂದು ನಾನು ಮೌಖಿಕವಾಗಿ ಹಾಗೂ ಲಿಖಿತವಾಗಿ ಎಂದೂ ಕೇಳಿರುವುದಿಲ್ಲ. ನಾನು ಅನಕ್ಷರಸ್ಥಳಾಗಿದ್ದು, ನನಗೆ ನಿಯಮಗಳನ್ನು ತಿಳಿಸದೇ ಚೆಕ್ಕನ್ನು ನನ್ನ ಹೆಸರಿಗೆ ಬರೆಯುವುದರ ಮುಖೇನ ನಿಯಮ ಬಾಹಿರ ಕೆಲಸಗಳನ್ನು ಮಾಡಿರುವುದು ಚೆಕ್‌ಗೆ ಸಹಿ ಮಾಡಲು ಅಧಿಕಾರ ಇವರದ್ದಾಗಿರುತ್ತದೆ. ರೂ.3900/-ಗಳನ್ನು 10ನೇ ವಾರ್ಡಿನಲ್ಲಿ ಗ್ರಾಮ ನೈರ್ಮಲ್ಯ ಕೆಲಸ ನಿರ್ವಹಿಸಿದ ಟ್ರ್ಯಾಕ್ಟರ್ ಬಾಡಿಗೆ ಹಾಗೂ ಕೂಲಿ ಮಾಡಿದ ಕಾರ್ಮಿಕರಿಗೆ ಕೊಡಲಾಗಿದೆ. ಇದನ್ನು ಡಿಸಿ ಬಿಲ್ ಪುಸ್ತಕದಲ್ಲಿ ಪಿಡಿಓ ನಮೂದಿಸಿರುತ್ತಾರೆ. ಬಿಲ್ಲುಗಳನ್ನು ಸಂಬಂಧಪಟ್ಟ ಅಂಗಡಿಯವರಿಂದ ಪಿಡಿಓ ಮತ್ತು ಅಧ್ಯಕ್ಷರು ಪಡೆದುಕೊಂಡಿರುತ್ತಾರೆ. ಇದರಲ್ಲಿ ಒಂದು ಪೈಸೆಯನ್ನು ನನ್ನ ಸ್ವಂತಕ್ಕೆ ಬಳಸಿರುವುದಿಲ್ಲ. ಸಾರ್ವಜನಿಕ ಹಿತಾಸಕ್ತಿಯಿಂದ ನಿರ್ವಹಿಸಿದ ಕೆಲಸವಾಗಿರುತ್ತದೆ ವಿನಃ ನನಗೆ ಯಾವುದೇ ಹಣಕಾಸಿನ ಹಿತಾಸಕ್ತಿ ಇರುವುದಿಲ್ಲ. ಆದ್ದರಿಂದ ನನ್ನ ಮೇಲೆ ಮಾಡಿರುವ ಎಲ್ಲಾ ಆರೋಪಗಳು ಸತ್ಯಕ್ಕೆ ದೂರವಾಗಿರುತ್ತದೆ. ನಾನು ಪ್ರತ್ಯಕ್ಷವಾಗಲೀ ಅಥವಾ ಪರೋಕ್ಷವಾಗಲೀ ಯಾವುದೇ ರೀತಿಯ ನಿಮಯಬಾಹಿರ ಚಟುವಟಿಕೆಯಲ್ಲಿ ಭಾಗವಹಿಸಿರುವುದಿಲ್ಲ. ನನ್ನ ಮೇಲಿನ ಆರೋಪಗಳನ್ನು ವಜಾಗೊಳಿಸಬೇಕೆಂದು ವಿನಂತಿಸಿಕೊಂಡಿರುತ್ತಾರೆ.

5. ಶ್ರೀ ಹೆಚ್.ಆರ್.ಶಂಕರ್, ಸದಸ್ಯರು, ಹುಳಿಯಾರು ಗ್ರಾಮ ಪಂಚಾಯತಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ ರವರು 2015-16ನೇ ಸಾಲಿನ ವರ್ಗ-1 ರಡಿಯಲ್ಲಿ ರೂ.26730/-ಗಳ ಹಣವನ್ನು ನನ್ನ ಹೆಸರಿಗೆ ಪಡೆದು ಹಣಕಾಸಿನ ಹಿತಾಸಕ್ತಿ ಹೊಂದಿರುವುದಾಗಿ ಆಪಾದಿಸಿದ್ದು, ಆದರೆ ನನಗೆ ಹಣ ನೀಡುವಂತೆ ಗ್ರಾ.ಪಂ.ಗೆ ನಾನು ಯಾವುದೇ ಶಿಫಾರಸ್ಸು ಮಾಡಿರುವುದಿಲ್ಲ. ಪರಿಶೀಲಿಸಲಾಗಿ ಹುಳಿಯಾರು ಗ್ರಾಮ ಪಂಚಾಯತಿಯ ನಿಧಿ-1 ಯೋಜನೆಯಲ್ಲಿ ರೂ.26730/- ಶ್ರೀ ಹೆಚ್.ಆರ್.ಶಂಕರ್ ಹೆಸರಿನಲ್ಲಿ ವಿತರಿಸಿರುವುದು ತಿಳಿದುಬಂದಿರುತ್ತದೆ. ನಾನು ಈ ಚೆಕ್ಕಿನ ಹಣ ಪಡೆದಿರುವುದಿಲ್ಲ. ಉದ್ದೇಶಪೂರ್ವಕವಾಗಿ ನನ್ನ ಹೆಸರಿಗೆ ಚೆಕ್ ನೀಡಿರುತ್ತಾರೆ. ದಯಮಾಡಿ ನನ್ನ ಸದಸ್ಯತ್ವವನ್ನು ರದ್ದುಗೊಳಿಸಬಾರದೆಂದು ಈ ಮೂಲಕ ಕೋರಿರುತ್ತಾರೆ.
6. ಶ್ರೀ ಎಂ ಗಣೇಶ, ಸದಸ್ಯರು, ಹುಳಿಯಾರು ಗ್ರಾಮ ಪಂಚಾಯತಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ ರವರು 2015-16ನೇ ಸಾಲಿನ ವರ್ಗ-1 ರಡಿಯಲ್ಲಿ ರೂ.6200/-ಗಳ ಹಣವನ್ನು ನನ್ನ ಹೆಸರಿಗೆ ಪಡೆದು ಹಣಕಾಸಿನ ಹಿತಾಸಕ್ತಿ ಹೊಂದಿರುವುದಾಗಿ ಆಪಾದಿಸಿದ್ದು, ನನಗೆ ಹಣ ನೀಡುವಂತೆ ಗ್ರಾ.ಪಂ.ಗೆ ನಾನು ಯಾವುದೇ ಶಿಫಾರಸ್ಸು ಮಾಡಿರುವುದಿಲ್ಲ. ಆದ್ದರಿಂದ ದಯಮಾಡಿ ನನ್ನ ಸದಸ್ಯತ್ವವನ್ನು ರದ್ದುಗೊಳಿಸಬಾರದೆಂದು ಕೋರಿರುತ್ತಾರೆ".

ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿ ಮಾನ್ಯ ಮುಖ್ಯ ಕಾರ್ಯದರ್ಶಿಯವರ ನ್ಯಾಯಾಲಯದಲ್ಲಿ ದಿನಾಂಕ:09.01.2018 ಆಪಾದಿತ ಅಧ್ಯಕ್ಷರು ಹಾಗೂ 5 ಜನ ಆಪಾದಿತ ಸದಸ್ಯರು ತಮ್ಮ ಹೇಳಿಕೆಗಳನ್ನು ನೀಡಿರುತ್ತಾರೆ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ತುಮಕೂರು ರವರಿಗೆ ವಿವರಗಳನ್ನು ಸರಿಯಾಗಿ ಪರಿಶೀಲಿಸಿ ನಿರ್ಧಿಷ್ಟ ಚಾರ್ಜ್ಸ್ ನೀಡಲು ಆದೇಶಿಸಿದೆ ಪ್ರಕರಣವನ್ನು ದಿನಾಂಕ:2.02.2018 ರಂದು ಮುಂದೂಡಿದೆ ಎಂದು ಆದೇಶಿಸಲಾಯಿತು. ದಿನಾಂಕ: 20.03.2018ರಂದು ನಡೆದ ವಿಚಾರಣೆಯಲ್ಲಿ ಆಪಾದಿತ ಸದಸ್ಯರುಗಳು ಹಾಜರಿರುತ್ತಾರೆ ಆಪಾದಿತ ಅಧ್ಯಕ್ಷರು ತಾವು ಎಲ್ಲಾ ಸರಿಯಾಗಿ ನೀಡುವಂತೆ ಹೇಳಿಕೆ ನೀಡಿರುತ್ತಾರೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಿ ಒಂದು ವಾರದೊಳಗೆ ವರದಿ ನೀಡುವಂತೆ ಆದೇಶಿಸಲಾಯಿತು. ದಿನಾಂಕ: 16.01.2019ರಂದು ವಿಚಾರಣೆಯಲ್ಲಿ ಮತ್ತು ಸದಸ್ಯರುಗಳು ತಮ್ಮ ಹೇಳಿಕೆಗಳನ್ನು ನೀಡಿರುತ್ತಾರೆ. ಒಂದು ವಾರದೊಳಗೆ ವಿಚಾರಣೆ ನಡೆಸಿ, ವರದಿ ನೀಡುವಂತೆ ಆದೇಶಿಸಲಾಯಿತು. ದಿನಾಂಕ:01.09.2018ರಂದು ನಡೆದ ವಿಚಾರಣೆಯಲ್ಲಿ ಸಹಾಯಕ ಕಾರ್ಯದರ್ಶಿ, ಈಶ್ವರ್ ಪ್ರಸಾದ್, ಹಾಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುಳಿಯಾರು ಗ್ರಾಮ ಪಂಚಾಯತಿರವರು ಹಾಜರಿರುತ್ತಾರೆ. ಈ ವಿಚಾರಣೆಯಲ್ಲಿ ಶ್ರೀಮತಿ ಗೀತಾ ಅಧ್ಯಕ್ಷರು, ಶ್ರೀಮತಿ ಇಂದಿರಾಕಲಾ, ಶ್ರೀಮತಿ ಪುಟ್ಟಮ್ಮ, ಶ್ರೀಮತಿ ನೂರ್‌ಜಾನ್ ಬಿ. ರವರುಗಳು ಹಾಜರಿದ್ದು, ಬೇರೆ ಸದಸ್ಯರುಗಳು ಕೂಡ ಚೆಕ್ ಪಡೆದಿರುತ್ತಾರೆಂದು ಆರೋಪ ಮಾಡಿರುತ್ತಾರೆ ಈ ಬಗ್ಗೆ ಕಾರ್ಯನಿರ್ವಾಹಕ ಅಧಿಕಾರಿಗಳ ಪರವಾಗಿ ಹಾಜರಿದ್ದ ಅಧಿಕಾರಿಗಳಿಗೆ ವರದಿ ನೀಡುವಂತೆ ಸೂಚಿಸಲಾಯಿತು, ಹಾಗೂ ಹಾಜರಿದ್ದ ಅಧ್ಯಕ್ಷ/ಸದಸ್ಯರುಗಳ ಹೇಳಿಕೆಯನ್ನು ಪಡೆಯಲಾಯಿತು. ದಿನಾಂಕ: 29.01.2019ರಂದು ನಡೆದ ವಿಚಾರಣೆಯಲ್ಲಿ ಶ್ರೀಮತಿ ಹೆಚ್.ಎಸ್.ಗೀತಾ ಮತ್ತು ಇತರೆ ಸದಸ್ಯರುಗಳು, ಹುಳಿಯಾರು ಗ್ರಾಮ ಪಂಚಾಯತಿ, ಮುಖ್ಯಾಧಿಕಾರಿಗಳ ಪರವಾಗಿ ಶ್ರೀ ಹೆಚ್.ಆರ್.ಆನಂದ್, ಕ್ಲರ್ಕ್, ಹುಳಿಯಾರು ಪಟ್ಟಣ ಪಂಚಾಯತಿ ಇವರುಗಳು ಹಾಜರಾಗಿ ತಮ್ಮ ಹೇಳಿಕೆಯನ್ನು ತಿಳಿಸಿರುತ್ತಾರೆ ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಲಾಯಿತು.

ದಿನಾಂಕ: 22.01.2018ರ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಚಿಕ್ಕನಾಯಕನಹಳ್ಳಿ, ತಾಲ್ಲೂಕು ರವರ ವರದಿಯಲ್ಲಿ ಶ್ರೀ ಹೆಚ್.ಜಿ ಶಂಕರ್, ಸದಸ್ಯರು, ಹುಳಿಯಾರು ಗ್ರಾಮ ಪಂಚಾಯತಿ, ಇವರು ಯಾವುದೇ ಕಾಮಗಾರಿ ಅಥವಾ ಕೆಲಸಕ್ಕೆ ಸಂಬಂಧಿಸಿದಂತೆ ಪಂಚಾಯಿತಿಯಿಂದ ಯಾವುದೇ ಚೆಕ್ ಪಡೆದಿರುವುದಿಲ್ಲ ಹಾಗೂ ಯಾವುದೇ ಹಣಕಾಸಿನ ಹಿತಾಸಕ್ತಿ ಇರುವುದಿಲ್ಲ, ಲೆಕ್ಕ ತನಿಖಾ ವರದಿಯಲ್ಲಿ ತಪ್ಪಾಗಿ ನಮೂದಾಗಿರುತ್ತದೆ ಎಂದು ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹುಳಿಯಾರು ಗ್ರಾಮ ಪಂಚಾಯತಿರವರ ವರದಿಯ ಆಧಾರದ ಮೇಲೆ ವರದಿಸಿರುವುದಾಗಿ ತಿಳಿಸಿರುತ್ತಾರೆ.

ಶ್ರೀ ಹೆಚ್.ಜಿ ಶಂಕರ್, ಸದಸ್ಯರು, ಹುಳಿಯಾರು ಗ್ರಾಮ ಪಂಚಾಯತಿ, ಇವರು ಯಾವುದೇ ಕಾಮಗಾರಿ ಅಥವಾ ಕೆಲಸಕ್ಕೆ ಸಂಬಂಧಿಸಿದಂತೆ ಪಂಚಾಯಿತಿಯಿಂದ ಯಾವುದೇ ಚೆಕ್ ಪಡೆದಿರುವುದಿಲ್ಲ ಹಾಗೂ ಯಾವುದೇ ಹಣಕಾಸಿನ ಹಿತಾಸಕ್ತಿ ಹೊಂದಿರುವುದಿಲ್ಲವೆಂದು ಸಾಬೀತಾಗಿರುತ್ತದೆ. ಆದ್ದರಿಂದ ಸದರಿ ಪ್ರಕರಣದಲ್ಲಿ ಶ್ರೀ ಹೆಚ್.ಜಿ ಶಂಕರ್, ಸದಸ್ಯರು, ಹುಳಿಯಾರು ಗ್ರಾಮ ಪಂಚಾಯತಿ ಇವರನ್ನು ಈ ಪ್ರಕರಣದಿಂದ ಕೈಬಿಡಲು ಆದೇಶಿಸಿದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43-ಎ(1)(v) ಮತ್ತು 48(4)ರನ್ವಯ ಪಂಚಾಯತ್‌ನ ಯಾವುದೇ ಬೇರೆ ರೀತಿಯ ಕಾಮಗಾರಿಯನ್ನು ಕಾರ್ಯಗತಗೊಳಿಸುವಾಗ, ಕರಾರು ಸಂಬಂಧದ ಅಥವಾ ಕಾಮಗಾರಿಗೆ ಸಂಬಂಧಿಸಿದ ಯಾವುದೇ ವ್ಯವಹಾರದಲ್ಲಿ ಕುಟುಂಬದ ಹತ್ತಿರದ ಸಂಬಂಧಿಯಾಗಿರುವ ಯಾವೊಬ್ಬ ವ್ಯಕ್ತಿಯೊಂದಿಗೆ ಪ್ರತ್ಯಕ್ಷವಾಗಿ ತೊಡಗಿರುವುದು ಕಂಡುಬಂದರೆ ಅಥವಾ ಪಾಲುದಾರನಂತೆ, ನೌಕರನಂತೆ ಅಥವಾ ಅಂಥ ಅನ್ಯಥಾ ಸಂಘಸಂಸ್ಥೆ ಮಂಡಳಿಯಲ್ಲಿ ಸದಸ್ಯನಂತೆ ಸಹಭಾಗಿಯಾಗಿರುವನೆಂದು, ಕಂಡು ಬಂದರೆ, ಅವನಿಗೆ ಅಹವಾಲು ಹೇಳಿಕೊಳ್ಳಲು ಅವಕಾಶ ನೀಡಿದ ನಂತರ ಮತ್ತು ಅಗತ್ಯವೆಂದು ತಾನು ಭಾವಿಸಿದಂಥ ವಿಚಾರಣೆ ಮಾಡಿದ ನಂತರ ತೆಗೆದು ಹಾಕುವುದು ಸೂಕ್ತವೆಂದು ಭಾವಿಸಿದ್ದರೆ ಆ ಸದಸ್ಯನನ್ನು ಆತನ ಸದಸ್ಯತ್ವದಿಂದ ತೆಗೆದುಹಾಕಬಹುದೆಂದು ತಿಳಿಸಿದೆ.

ಸರ್ಕಾರವು ಲಭ್ಯವಿರುವ ಎಲ್ಲಾ ಸಾಕ್ಷ್ಯಾಧಾರಗಳು, ದಾಖಲಾತಿಗಳು, ಆಪಾದಿತರ ಲಿಖಿತ ಮತ್ತು ಮೌಖಿಕ ಹೇಳಿಕೆಗಳನ್ನು ಪರಿಶೀಲಿಸಿ, ಲಭ್ಯವಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಶ್ರೀಮತಿ ಗೀತಾ ಅಧ್ಯಕ್ಷರು ಶ್ರೀಮತಿ ಇಂದ್ರಕಲಾ, ಶ್ರೀಮತಿ ಪುಟ್ಟಮ್ಮ(ಪುಟ್ಟಿಬಾಯಿ), ಶ್ರೀ ಗಣೇಶ್, ಶ್ರೀಮತಿ ನೂರ್‌ಜಾನ್ ಬಿ, ಸದಸ್ಯರುಗಳು, ಹುಳಿಯಾರು ಗ್ರಾಮ ಪಂಚಾಯತಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ ಇವರುಗಳು ಹುಳಿಯಾರು ಗ್ರಾಮ ಪಂಚಾಯಿತಿಯ 14ನೇ ಹಣಕಾಸು ಯೋಜನೆಯಡಿಯಲ್ಲಿ ನಿಯಮಬಾಹಿರವಾಗಿ ಗ್ರಾಮ ಪಂಚಾಯತಿಯಿಂದ ಸಾಮಗ್ರಿ ಖರೀದಿ ಮತ್ತು 2015-16, 2016-17ನೇ ಸಾಲಿನ ವರ್ಗ-1ರ ನಿಧಿಯಿಂದ ಕಾಮಗಾರಿ ನಿರ್ವಹಿಸಿದ ಬಾಬ್ತು ಹಣವನ್ನು ಅವರುಗಳ ಹೆಸರಿಗೆ ಪಡೆದಿರುವುದು, ಹಣಕಾಸಿನ ಹಿತಾಸಕ್ತಿ ಹೊಂದಿರುವ ಆರೋಪವು ಸಾಬೀತಾಗಿರುತ್ತದೆ.

ಅದರಂತೆ ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 1107 ಗ್ರಾಪಂಅ 2017,</u>**
**<u>ಬೆಂಗಳೂರು, ದಿನಾಂಕ: 20.03.2019.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಲಭ್ಯವಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿ, ಶ್ರೀಮತಿ ಗೀತಾ ಅಧ್ಯಕ್ಷರು ಶ್ರೀಮತಿ ಇಂದ್ರಕಲಾ, ಶ್ರೀಮತಿ ಪುಟ್ಟಮ್ಮ(ಪುಟ್ಟಿಬಾಯಿ), ಶ್ರೀ ಗಣೇಶ್, ಶ್ರೀಮತಿ ನೂರ್‌ಜಾನ್ ಬಿ, ಸದಸ್ಯರುಗಳು, ಹುಳಿಯಾರು ಗ್ರಾಮ ಪಂಚಾಯತಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ ಇವರುಗಳು ಹುಳಿಯಾರು ಗ್ರಾಮ ಪಂಚಾಯಿತಿಯ 14ನೇ ಹಣಕಾಸು ಯೋಜನೆಯಡಿಯಲ್ಲಿ ನಿಯಮಬಾಹಿರವಾಗಿ ಗ್ರಾಮ ಪಂಚಾಯತಿಯಿಂದ ಸಾಮಾಗ್ರಿ ಖರೀದಿ ಮತ್ತು 2015-16, 2016-17ನೇ ಸಾಲಿನ ವರ್ಗ-1ರ ನಿಧಿಯಿಂದ ಕಾಮಗಾರಿ ನಿರ್ವಹಿಸಿದ ಬಾಬ್ತು ಹಣವನ್ನು ಅವರುಗಳ ಹೆಸರಿಗೆ ಪಡೆದಿರುವುದು, ಹಣಕಾಸಿನ ಹಿತಾಸಕ್ತಿ ಹೊಂದಿರುವ ಆರೋಪವು ಸಾಬೀತಾಗಿರುವುದರಿಂದ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43(ಎ)(1)(v) ಮತ್ತು 48(4) ರನ್ವಯ ಶ್ರೀಮತಿ ಗೀತಾ ಅಧ್ಯಕ್ಷರು ಹುಳಿಯಾರು ಗ್ರಾಮ ಪಂಚಾಯತಿಯ ಅಧ್ಯಕ್ಷ ಹಾಗೂ ಸದಸ್ಯತ್ವ ಸ್ಥಾನದಿಂದ ಮತ್ತು ಶ್ರೀಮತಿ ಇಂದ್ರಕಲಾ, ಶ್ರೀಮತಿ ಪುಟ್ಟಮ್ಮ(ಪುಟ್ಟಿಬಾಯಿ), ಶ್ರೀ ಗಣೇಶ್, ಶ್ರೀಮತಿ ನೂರ್‌ಜಾನ್ ಬಿ, ಸದಸ್ಯರುಗಳನ್ನು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43(ಎ)(1)(v) ರನ್ವಯ ಸದಸ್ಯತ್ವ ಸ್ಥಾನದಿಂದ ತಕ್ಷಣದಿಂದ ಜಾರಿಗೆ ಬರುವಂತೆ ತೆಗೆದು ಹಾಕಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

20/3/19

(ಮುಬಾರಕ್ ಅಹ್ಮದ್),
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

<u>ಗೆ:</u>

1) ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ತುಮಕೂರು ಜಿಲ್ಲಾ ಪಂಚಾಯಿತಿ, ತುಮಕೂರು ಜಿಲ್ಲೆ.
2) ಕಾರ್ಯನಿರ್ವಾಹಕಾಧಿಕಾರಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು ಪಂಚಾಯಿತಿ, ತುಮಕೂರು ಜಿಲ್ಲೆ.
3) ಶ್ರೀಮತಿ ಹೆಚ್.ಎಸ್.ಗೀತಾ ಅಧ್ಯಕ್ಷರು, ಮತ್ತು ಇತರ ಸದಸ್ಯರು, ಹುಳಿಯಾರು ಗ್ರಾಮ ಪಂಚಾಯಿತಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ.

4) ಶ್ರೀ ಹೆಚ್.ಜಿ.ಶಂಕರ್, ಸದಸ್ಯರು, ಹುಳಿಯಾರು ಗ್ರಾಮ ಪಂಚಾಯಿತಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ.
5) ಶ್ರೀಮತಿ ಇಂದ್ರಕಲಾ, ಸದಸ್ಯರು, ಹುಳಿಯಾರು ಗ್ರಾಮ ಪಂಚಾಯಿತಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ.
6) ಶ್ರೀಮತಿ ಪುಟ್ಟಮ್ಮ (ಪುಟ್ಟಿಬಾಯಿ) ಸದಸ್ಯರು, ಹುಳಿಯಾರು ಗ್ರಾಮ ಪಂಚಾಯಿತಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ.
7) ಶ್ರೀ ಗಣೇಶ್, ಸದಸ್ಯರು, ಹುಳಿಯಾರು ಗ್ರಾಮ ಪಂಚಾಯಿತಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ.
8) ಶ್ರೀಮತಿ ನೂರ್‌ಜಾನ್ ಬಿ, ಸದಸ್ಯರು, ಹುಳಿಯಾರು ಗ್ರಾಮ ಪಂಚಾಯಿತಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ.
9) ಗಣಕ ಕೋಶ-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
10) ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ.

<u>ಪ್ರತಿಯನ್ನು ಮಾಹಿತಿಗಾಗಿ:</u>

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2) ಸರ್ಕಾರದ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3) ನಿರ್ದೇಶಕರು(ಪಂ.ರಾಜ್-1), ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು.